ದಿನಾಂಕ: 20 ಏಪ್ರಿಲ್ 2014

# ಪ್ರಚಾರ ದಿನಚರಿ-20/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಲೋಕಪಾಲ್ ನೇಮಕ ವಿವಾದಕ್ಕೆ ಉಪಶಮನವಿಲ್ಲ. ಲೋಕ್ ಪಾಲ್ ಕಾಯಿದೆ ಅಡಿ ಯುಪಿಎ ಸರ್ಕಾರ ನಿಯಮಗಳನ್ನು ರೂಪಿಸಿದೆ. ಆದರೆ ಈ ನಿಯಮಗಳು ಕಾಯಿದೆಗೆ ತದ್ವಿರುದ್ಧವಾಗಿವೆ. ಸರ್ವೋಚ್ಚ ನ್ಯಾಯಾಲಯದ ಮುಂದೆ ಈ ಕುರಿತಂತೆ ಈಗಾಗಲೆ ವ್ಯಾಜ್ಯ ಹೂಡಲಾಗಿದೆ.

ಚುನಾವಣೆಗಳನ್ನು ಘೋಷಿಸುವ ಮುನ್ನ ಯುಪಿಎ ಸರ್ಕಾರ ತರಾತುರಿಯಲ್ಲಿ ಲೋಕಪಾಲ್ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸುವ ಪ್ರಕ್ರಿಯೆ ಆರಂಭಿಸಿತ್ತು. ಶೋಧನಾ ಸಮಿತಿಯನ್ನು ಅವಸರದಲ್ಲಿ ನೇಮಿಸಲಾಯಿತು. ಶೋಧನಾ ಸಮಿತಿಯ ಅಧಿಕಾರವನ್ನು ಆಕ್ರಮಿಸಿದ ಸಿಬ್ಬಂದಿ ಇಲಾಖೆಯು ನೇಮಕ ಯೋಗ್ಯ ವ್ಯಕ್ತಿಗಳ ಪಟ್ಟಿ ತಯಾರಿಸಿತ್ತು. ಅನುಸರಿಸಿದ ಪದ್ಧತಿಯ ಕುರಿತು ಶೋಧನಾ ಸಮಿತಿಯ ಗಣ್ಯ ಸದಸ್ಯರೂ ಸೇರಿದಂತೆ ಪ್ರತಿಯೊಬ್ಬರಿಗೆ ಕಸಿವಿಸಿ ಆಯಿತು. ಇಬ್ಬರು ಪ್ರತಿಷ್ಠಿತ ಸದಸ್ಯರಾಗಿದ್ದ ಫಾಲಿ ಎಸ್.ನಾರಿಮನ್ ಹಾಗೂ ನ್ಯಾಯಮೂರ್ತಿ ಕೆ.ಟಿ.ಥಾಮಸ್ ಇದನ್ನೇ ಕಾರಣವಾಗಿ ನೀಡಿ ಶೋಧನಾ ಸಮಿತಿಯ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದ್ದರು.

ಇಂದು, ಪೂರ್ಣ ಪ್ರಮಾಣದ ಸದಸ್ಯತ್ವವನ್ನು ಶೋಧನಾ ಸಮಿತಿ ಹೊಂದಿಲ್ಲ. ಶೋಧನಾ ಸಮಿತಿ ರಚಿಸಿದ ಬಳಿಕ, ಯೋಗ್ಯ ಅಭ್ಯರ್ಥಿಗಳ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಅದರ ನಂತರ, ಶೋಧನಾ ಸಮಿತಿಯು ಯೋಗ್ಯರಾದವರ ಹೆಸರುಗಳನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳಿಸುವುದುಂಟು.

ದೇಶದಲ್ಲಿ ಈಗಾಗಲೇ ಅರ್ಧದಷ್ಟು ಚುನಾವಣೆಗಳು ಪೂರ್ಣಗೊಂಡಿವೆ. ಫಲಿತಾಂಶ ಪ್ರಕಟಗೊಳ್ಳಲು ಹಾಗೂ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲು ಕೇವಲ 26 ದಿವಸಗಳು ಉಳಿದಿವೆ. ಲೋಕ್ ಪಾಲ್ ನೇಮಕಕ್ಕೆ ಅನುಸೂಚಿತ ಪದ್ಧತಿ ಅನುಸರಿಸದ ಯುಪಿಎ ಸರ್ಕಾರ ನೇಮಕ ಪ್ರಕ್ರಿಯೆಯನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸುವ ತವಕದಲ್ಲಿದೆ. ಇದು ಕದಾಪಿ ಸರಿಯಲ್ಲ.

ಈ ಹಂತದಲ್ಲಿ ನೇಮಕ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಅವಸರದಲ್ಲಿರುವ ಯುಪಿಎ ಕ್ರಮವು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಮಾಡುವ ಜೊತೆಗೆ ಅಗಾಧ ರಾಜಕೀಯ ಅನೌಚಿತ್ಯ ಎಸಗಿದಂತಾಗುತ್ತದೆ. ಇದಲ್ಲದೆ, ಅನುಸರಿಸಿದ ಪ್ರಕ್ರಿಯೆ ಕಾನೂನು ಪ್ರಕಾರ ಸಂಶಯವನ್ನು ಹುಟ್ಟಿಸುತ್ತದೆ. ಲೋಕಪಾಲ್ ಸೃಷ್ಟಿಸುವ ಮುನ್ನವೇ ಅದರ ವಿಶ್ವಾಸಾರ್ಹತೆಯನ್ನು ಕೊಲ್ಲುವ ಅನೈತಿಕ ಆತುರವನ್ನು ತೋರಲಾಗಿದೆ. ಈ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸುವ ಅಗತ್ಯವಿದೆ. ಶೋಧನಾ ಸಮಿತಿಯ ಸದಸ್ಯರನ್ನು ತುಂಬಲು ಪ್ರಧಾನ ಮಂತ್ರಿ ಕಚೇರಿ ಕರೆದಿರುವ ಸಭೆಯನ್ನು ತಕ್ಷಣ ನಿಲ್ಲಿಸಬೇಕು.

ಡಾ.ಮನಮೋಹನ್ ಸಿಂಗ್ ಅವರು ನಿವೃತ್ತರಾಗುವ ಮನೋಸ್ಥಿತಿಯಲ್ಲಿದ್ದಾರೆ. ಈ ಹಂತದಲ್ಲಿ ಅನುಸೂಚಿತ ಪ್ರಕ್ರಿಯೆ ಅನುಸರಿಸದೆ ಲೋಕಪಾಲ್ ನೇಮಕ ಪ್ರಕ್ರಿಯೆಯನ್ನು ತರಾತುರಿಯಲ್ಲಿ ಪೂರ್ಣಗೊಳಿಸುವ ಪ್ರಯತ್ನ ನಡೆಸಿದರೆ, ಪಕ್ಷದ ನಾಯಕರ ನಿರ್ದೇಶನದಂತೆ ಸಂಸ್ಥೆಗಳ ಪಾವಿತ್ರ್ಯವನ್ನು ಹಾಳು ಮಾಡಿದ ಪ್ರಧಾನಿ ಎಂಬ ಅಪಖ್ಯಾತಿಗೆ ಪಾತ್ರವಾಗಬೇಕಾಗುತ್ತದೆ ಎಂದು ಡಾ. ಸಿಂಗ್ ಆತ್ಮಾವಲೋಕನಾ ಮಾಡಿಕೊಳ್ಳಬೇಕಾಗಿದೆ. ಆದರೂ ಸಹ ಅವರು ಇದೇ

ತರಾತುರಿಯಲ್ಲಿ ಮುಂದುವರಿದರೆ, ಅವರ ಕೃತ್ಯವನ್ನು ತಡೆಯುವ ಶಕ್ತಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದೆ. ಪ್ರಧಾನ ಮಂತ್ರಿಗಳು ಅಳಿದುಳಿದ ವಿಶ್ವಾಸಾರ್ಹತೆ ಬಿಟ್ಟರೆ ಬೇರೆ ಏನನ್ನು ಕಳೆದುಕೊಳ್ಳುವುದಿಲ್ಲ.

✲✲✲✲✲